## ಕವಿತೆ





ಮೂಲ: **ಅಂಕಿತಾ ರಾಸುರಿ**

ಕನ್ನಡಕ್ಕೆ: **ರೇಣುಕಾ ನಿಡಗುಂದಿ**

ಕಲೆ: ರೂಪಶ್ರೀ ಕಲ್ಲಿಗನೂರು


# ಅನ್ ವಾಂಟೆಡ್ 72

ಸಂಭೋಗವೆಂಬುದು ನನ್ನ ಪಾಲಿಗೆಷ್ಟು ಮಾರಣಾಂತಿಕವೆಂದು ಸಾಬೀತಾಯ್ತು
ಮಾನ ಮರ್ಯಾದೆಯಂತಹ ವಿಚಾರಗಳಿಂದಲೇ ಒಂದು ತಲೆಮಾರು ನನ್ನ ಭಯಭೀತಗೊಳಿಸಿದರೆ
ಇನ್ನೊಂದು ತಲೆಮಾರು ಅದರ ಪರಿಣಾಮಗಳಿಂದ ಅಂಜಿಸಿತು
ನಾನೋ ಪ್ರತಿ ಸಂಭೋಗದ ಬಳಿಕ ಪ್ರೇಮದ ಹೆಸರಿನಲ್ಲಿ ಅನ್ವಾಂಟೆಡ್ 72 ನುಂಗುತ್ತಲೇ ಇದ್ದೆ!

ಹಗಲು ರಾತ್ರಿಯ ಈ ಆವರ್ತನದಲಿ ಕೊಳೆಯುತ್ತಿರುವ ನನ್ನ ಬದುಕು
ಜೀವನ್ಮರಣದ ಈ ಅವಸ್ಥೆಗೆ ನನ್ನ ದೇಹ ಹಾಳಾಯ್ತು
ಯಾವ ಕಂಪನಿಗಳೂ ಹೇಳುವುದಿಲ್ಲ ಇದು ಔಷಧವಲ್ಲ ಸ್ಲೋ ಪಾಯಿಸನ್ ಎಂದು
ಆದಕೇ ನಾನಿಂದು ಆಸ್ಪತ್ರೆಯ ಹಾಸಿಗೆಯಲ್ಲಿ ಬಿದ್ದಿರುವೆ!

ಐಸಿಯೂದೊಳಗೆ ಸಾಗುತ್ತ ನಮ್ಮಿಬ್ಬರ ಕುರಿತೇ ಯೋಚಿಸುತ್ತಿದ್ದೇನೆ
ಪಾಪ ನೀನು ನಿನ್ನದೇ ಅಪರಾಧವೆಂಬಂತೆ ಪರಿತಪಿಸುತ್ತಿದ್ದೆ
ನಮ್ಮೆದುರು ಅದೆಷ್ಟು ಸವಾಲುಗಳಿದ್ದವು ಎದುರಿಸಲು
ಸಂಪ್ರದಾಯ ನನ್ನನೆಂದೂ ತಾಯಿಯಾಗಿ ಸ್ವೀಕರಿಸದು
ಈ ಆಸ್ಪತ್ರೆಯವರಿಗೂ ನಮ್ಮ ಪ್ರೇಮದಿಂದೇನೂ ಆಗಬೇಕಿಲ್ಲ
ಇಲ್ಲಿ ಸಾವು ಬದುಕಿನ ಪ್ರಶ್ನೆಯ ನಡುವಿನ ಅಂತರ
ಕೇವಲ ಐವತ್ತು ಸಾವಿರ ಮುಂಗಡ ಹಣವಿತ್ತೇ ಹೊರತು
ಎಪ್ಪತ್ತೆರಡು ಗಂಟೆಗಳ ವಿಷದೊಂದಿಗೆ ಪ್ರೇಮದ ವ್ಯಾಪಾರ ಮಾಡುವ ಈ ಕಂಪನಿಗಳಲ್ಲ...



ನಿನ್ನ ಒಲವು ತುಂಬಿದ ಸೋತ ಕಣ್ಣುಗಳೆದುರು
ನನ್ನ ದೇಹದ ತುಂಬ ಅದೆಷ್ಟು ಸೂಜಿಗಳು ಚುಚ್ಚಿಕೊಂಡಿವೆ
ಮತ್ತೀಗ ಕೊನೆ ಏನಾಗಬಹುದಿತ್ತು
ಒಂದು ಹೆಣ್ಣಿನ ದೇಹಕ್ಕೆ
ಎಲ್ಲವೂ ವರ್ಜಿತ ಅಪಾಯಕಾರಿಯನ್ನಾಗಿಸಿದಾಗ!